## ಅಧ್ಯಾಯ–೧

# ಪ್ರಾಸ್ತಾವಿಕ

**ಪೀಠಿಕೆ :** ಕರ್ನಾಟಕ ರಾಜ್ಯದ ದಕ್ಷಿಣ ತುದಿಯಲ್ಲಿರುವ ಹೆಗ್ಗಡದೇವನಕೋಟೆ ತಾಲೂಕು, ಮೈಸೂರು ಜಿಲ್ಲೆಯ ಏಳು ತಾಲೂಕುಗಳಲ್ಲಿ ಒಂದು. ಜಿಲ್ಲೆಯ ನೈಋತ್ಯ ಭಾಗದಲ್ಲಿ ವ್ಯಾಪಿಸಿರುವ ಈ ತಾಲೂಕು, ಜಿಲ್ಲೆಯ ನೈಋತ್ಯ ಗಡಿಯೂ ಹೌದು. ಈ ತಾಲೂಕಿಗೆ ೧೮೬೪–೧೮೮೬ರವರೆಗೆ ಸರಗೂರು ತಾಲೂಕು ಕೇಂದ್ರವಾಗಿತ್ತು, ಆನಂತರ ಹೆಗ್ಗಡದೇವನಕೋಟೆಯು ತಾಲೂಕಿನ ಕೇಂದ್ರವಾಗಿ ೧೮೮೯ರಿಂದ ಚಲಾವಣೆಗೆ ಬಂದಿತು. ಕಪಿಲಾ ನದಿಯ ಕೂಡು ನದಿಯಾದ ತಾರಕದ ಎಡದಂಡೆ ಮೇಲಿರುವ ಇದು ಆಡಳಿತಾತ್ಮಕ ಮಹತ್ವವನ್ನು ಪಡೆಯಿತು. ಮುಂದೆ ೧೯೩೯ ಹಾಗೂ ೧೯೯೭ರಲ್ಲಿ ಮೈಸೂರು ಜಿಲ್ಲೆಯು ವಿಭಜಿಸಲ್ಪಟ್ಟರೂ, ಹೆಗ್ಗಡದೇವನಕೋಟೆ ತಾಲೂಕು, ಮೈಸೂರು ಜಿಲ್ಲೆಯ ಭಾಗವಾಗಿಯೇ ಮುಂದುವರಿದಿದೆ.

ಸುಮಾರು ೧೬೩೨.೪೦ ಚ.ಕಿ.ಮೀ ಭೌಗೋಳಿಕ ವಿಸ್ತೀರ್ಣವನ್ನು ಹೊಂದಿರುವ ಇದು, ಜಿಲ್ಲೆಯ ಅತ್ಯಂತ ದೊಡ್ಡ ತಾಲೂಕಾಗಿದೆ. ಪಶ್ಚಿಮ ಘಟ್ಟಶ್ರೇಣಿಯ ಸೆರಗಿನಲ್ಲಿರುವ ಈ ತಾಲೂಕಿನಲ್ಲಿ ಚಿಕ್ಕಮ್ಮದೇವಿಬೆಟ್ಟ ಹಾಗೂ ಮೇಟಕಲ್ ಗುಡ್ಡಗಳು (ಮಾದಾಪುರ ಸಮೀಪ) ಇವೆ. ತಾಲೂಕಿನ ಹೆಚ್ಚು ಭಾಗ ಅರಣ್ಯ ಪ್ರದೇಶದಿಂದ ಕೂಡಿದ್ದು ಸೀಮಿತ ಬಯಲುಪ್ರದೇಶವನ್ನು ಹೊಂದಿದೆ. ತಾಲೂಕಿನ ದಟ್ಟವಾದ ಅರಣ್ಯ ಪ್ರದೇಶದಲ್ಲಿ ಇತಿಹಾಸಪೂರ್ವ ಕಾಲದ ನೆಲೆಗಳು ಇರಬಹುದಾದರೂ ಈವರೆಗೆ ಯಾವುದೂ ಪತ್ತೆಯಾಗಿಲ್ಲ. ನಾಡಿನ ಆರ್ಥಿಕ ಬದುಕನ್ನು ರೂಪಿಸುವಲ್ಲಿ ಕಪಿಲ ಮತ್ತು ಅದರ ಉಪನದಿಗಳು ಕಾಲದುದ್ದಕ್ಕೂ ಮಹತ್ವದ ಪಾತ್ರವನ್ನು ವಹಿಸಿಕೊಂಡು ಬಂದಿದ್ದು, ತಾಲೂಕಿಗೆ ಅಲ್ಪ ಪ್ರಮಾಣದಲ್ಲಿ ನೀರಾವರಿ ಸೌಲಭ್ಯವನ್ನು ಒದಗಿಸಿಕೊಟ್ಟಿವೆ. ತಾಲೂಕನ್ನು ಆಳಿದ ಪುನ್ನಾಟದ ಅರಸರು, ಗಂಗರಸರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು ಹಾಗೂ ಮೈಸೂರು ಅರಸರ ಕಾಲಕ್ಕೆ ಸೇರಿದ ಶಾಸನ, ದೇವಾಲಯ, ವೀರಗಲ್ಲು–ಮಾಸ್ತಿಕಲ್ಲುಗಳು ತಾಲೂಕಿನಲ್ಲಿದ್ದು, ತಾಲೂಕಿನ ಇತಿಹಾಸದ ಮೇಲೆ ಹೆಚ್ಚಿನ ಬೆಳಕನ್ನು ಬೀರಿವೆ.

ತಾಲೂಕಿನ ಸರಾಸರಿ ವಾರ್ಷಿಕ ಮಳೆ ೮೧೮.೨೫ ಮಿ.ಮಿ ಇದ್ದು ಜಿಲ್ಲಾ ಸರಾಸರಿ ಮಳೆ ಪ್ರಮಾಣ (೭೬೨ ಮಿ.ಮೀ) ಕ್ಕಿಂತ ಹೆಚ್ಚಾಗಿದೆ. ತಾಲೂಕಿನ ಹವಾಗುಣ ವರ್ಷದುದ್ದಕ್ಕೂ ಹಿತಕರವಾಗಿದ್ದು, ಇದನ್ನು ಭೂಕಂಪನಮುಕ್ತ ಪ್ರದೇಶವೆಂದೇ ಸಾಮಾನ್ಯವಾಗಿ ಪರಿಗಣಿಸಲಾಗಿದೆ. ಅರಣ್ಯ ಸಂಪನ್ಮೂಲ ದೃಷ್ಟಿಯಿಂದ ಜಿಲ್ಲೆಯು ರಾಜ್ಯಮಟ್ಟದಲ್ಲಿ ದ್ವಿತೀಯ ಸ್ಥಾನದಲ್ಲಿದ್ದು, ಅದಕ್ಕೆ ಹೋಲಿಸಿದರೆ ತಾಲೂಕಿನ ಅರಣ್ಯ ಪ್ರಮಾಣವು ತುಂಬಾ ಗಣನೀಯವಾಗಿದೆ. ಕಪಿಲ, ತಾರಕ, ನುಗು, ಹೆಬ್ಬಳ್ಳ ಮೊದಲಾದ ನದಿ ಹಾಗೂ ಹಳ್ಳ ಕೊಳ್ಳಗಳಿಂದಾಗಿ ಬತ್ತ, ಕಬ್ಬು, ರಾಗಿ, ಜೋಳ, ಹತ್ತಿ, ನೆಲಗಡಲೆ, ರೇಷ್ಮೆ ಮೊದಲಾದವು ತಾಲೂಕಿನ ಪ್ರಮುಖ ಬೆಳೆಗಳಾಗಿವೆ. ತೋಟಗಾರಿಕೆ ಅಲ್ಪ ಪ್ರಮಾಣದಲ್ಲಿ ಕಂಡು ಬರುತ್ತದೆ. ಪಶುಸಂಪನ್ಮೂಲವು ಸಮೃದ್ಧವಾಗಿದ್ದು, ಹೈನುಗಾರಿಕೆ, ಕೋಳಿ ಸಾಕಣೆ, ಮೀನುಗಾರಿಕೆಯಂತಹ ಉದ್ಯಮಗಳು ಪರಿಣಾಮಕಾರಿಯಾಗಿ ಬೆಳದಿವೆ. ಇಟ್ಟಿಗೆ ಕೈಗಾರಿಕೆ, ಬುಟ್ಟಿ ಹೆಣೆಯುವುದು, ಬಿದಿರಿನ ಉತ್ಪನ್ನಗಳ ತಯಾರಿಕೆ, ಏಣಿ ತಯಾರಿಸುವುದು, ಕೈ ಮಗ್ಗ, ಅಗರಬತ್ತಿ, ಕುಂಬಾರಿಕೆ ಮೊದಲಾದ ಸಣ್ಣ ಕೈಗಾರಿಕೆಗಳೂ ತಾಲೂಕಿನಲ್ಲಿವೆ.

ರಾಜ್ಯದ ೨೦೦೯–೧೪ರ ಕೈಗಾರಿಕಾ ನೀತಿಯನ್ವಯ ಈ ತಾಲೂಕು ಕೈಗಾರಿಕಾ ದೃಷ್ಟಿಯಿಂದ ಅತೀ ಹೆಚ್ಚು ಹಿಂದುಳಿದ ತಾಲೂಕಾಗಿದ್ದು ವಲಯ–I ಕ್ಕೆ ಸೇರಿದ್ದು, ಕೈಗಾರಿಕೋದ್ಯಮಕ್ಕೆ ಹೇರಳ ಅವಕಾಶವಿದ್ದು ಸರ್ಕಾರದಿಂದಲೂ ವಿಶೇಷ ಸವಲತ್ತು ರಿಯಾಯಿತಿಗಳು ಲಭ್ಯವಿದ್ದು, ಕೈಗಾರಿಕಾ ಅಭಿವೃದ್ಧಿ ಆಗಬೇಕಿದೆ. ರೇಷ್ಮೆ ಉದ್ಯಮಕ್ಕೆ ಜಿಲ್ಲೆಯಲ್ಲಿ ಮೂರನೆಯ ಸ್ಥಾನವಿದೆ. ತಾಲೂಕಿನಲ್ಲಿ ವಾಣಿಜ್ಯ ಹಾಗೂ ಬ್ಯಾಂಕಿಂಗ್ ಚಟುವಟಿಕೆಗಳು, ಬಹಳ ತಡವಾಗಿ ಆರಂಭಗೊಂಡಿದ್ದರೂ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ವಿಜಯ ಬ್ಯಾಂಕ್, ಎಂ.ಡಿ.ಸಿ.ಸಿ. ಶಾಖಾ ಬ್ಯಾಂಕ್ ಹಾಗೂ ಕಾವೇರಿ ಗ್ರಾಮೀಣ ಶಾಖಾ ಬ್ಯಾಂಕುಗಳು ತಾಲೂಕಿನಲ್ಲಿ ಕ್ರಿಯಾಶೀಲವಾಗಿವೆ. ಅರಣ್ಯೋತ್ಪಾದನೆಗಳಿಗೆ ತಾಲೂಕು ಹೆಸರುವಾಸಿಯಾಗಿದೆ. ತಾಲೂಕಿನ ಸಾರಿಗೆ ಸಂಪರ್ಕವು ಗಣನೀಯ ಪ್ರಮಾಣದಲ್ಲಿ ಸುಧಾರಿಸಿದ್ದು ರಾಜ್ಯಹೆದ್ದಾರಿಗಳನ್ನು ಹೊಂದಿದೆ. ಅಂಚೆ, ತಂತಿ, ದೂರವಾಣಿ ಸೇವೆಯಲ್ಲಿಯೂ ಗಮನಾರ್ಹ ಪ್ರಗತಿಯಾಗಿದೆ. ತಾಲೂಕಿನಲ್ಲಿ ಐದು ಹೋಬಳಿ (ಕಸಬಾ, ಹಂಪಾಪುರ, ಸರಗೂರು, ಹದಲಿಕೆ ಹಾಗೂ ಅಂತರಸಂತೆ), ೨೪೩ ಜನವಸತಿ ಗ್ರಾಮಗಳು, ೩೮ ನಿರ್ವಸತಿ ಗ್ರಾಮಗಳು ಹಾಗೂ ೩೨೦ ಉಪಗ್ರಾಮಗಳು ಇವೆ. ಅಲ್ಲದೆ, ಎರಡು ಪಟ್ಟಣ ಪಂಚಾಯಿತಿ (ಹೆಗ್ಗಡದೇವನಕೋಟೆ ಹಾಗೂ ಸರಗೂರು) ಹಾಗೂ ೩೨ ಗ್ರಾಮ ಪಂಚಾಯಿತಿಗಳು ಸ್ಥಳೀಯ ಸ್ವಯಂ ಆಡಳಿತ ಘಟಕಗಳಾಗಿ ಪ್ರಾದೇಶಿಕ ಅಭಿವೃದ್ಧಿಯಲ್ಲಿ ತೊಡಗಿವೆ. ಸಾರ್ವಜನಿಕ ಆಸ್ಪತ್ರೆ, ಆರೋಗ್ಯ ಕೇಂದ್ರ, ಆರೋಗ್ಯ ಘಟಕಗಳ ಮೂಲಕ ವೈದ್ಯಕೀಯ ಸೇವೆಯೂ ತಾಲೂಕಿನಲ್ಲಿ ಉತ್ತಮವಾಗಿ ಲಭಿಸುತ್ತಿದೆ. ಮೈರಾಡ, ನಿಸರ್ಗ, ಪೆಡಿನಾ, ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಮೊದಲಾದ ಸ್ವಯಂ ಸೇವಾ ಸಂಸ್ಥೆಗಳು ಗ್ರಾಮೀಣಾಭಿವೃದ್ಧಿಯಲ್ಲಿ ಹೆಚ್ಚಿನ ಪಾತ್ರವನ್ನು ವಹಿಸುತ್ತಿವೆ. ಪತ್ರಿಕಾ ಭೀಷ್ಮರೆಂದೇ

ಪ್ರಸಿದ್ಧರಾದ, ಈ ತಾಲೂಕಿನ ಎಂ. ವೆಂಕಟಕೃಷ್ಣಯ್ಯ (ತಾತಯ್ಯ), ವಿದ್ವಾಂಸರಾದ ಪ. ನಾಗರಾಜಯ್ಯ, ನ್ಯಾಯವಾದಿ, ಕಾನೂನು ಲೇಖಕ ವಿ.ಹೆಚ್. ಗೌಡ, ಬರಹಗಾರ ಶ್ರೀ ಕೃಷ್ಣ ಆಲನಹಳ್ಳಿ ಮೊದಲಾದವರು ನಾಡಿನ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ.

ಪುನ್ನಾಟ ಅರಸರ ರಾಜ್ಯಧಾನಿಯಾಗಿತ್ತೆಂದು ಹೇಳಲಾಗುವ ಕಿತ್ತೂರು (ಕೀರ್ತಿಪುರ), ಕೆ.ಬೆಳತೂರು, ಮಾದಾಪುರ, ಹಿರಿನಂದಿ; ಖೆಡ್ಡಕ್ಕೆ ಹೆಸರಾಗಿದ್ದ ಕಾಕನಕೋಟೆ; ಬೀಚನಹಳ್ಳಿ ಹಾಗೂ ತಾರಕ ಅಣೆಕಟ್ಟುಗಳು ತಾಲೂಕಿನ ಪ್ರಮುಖ ಪ್ರವಾಸಿ ತಾಣಗಳಾಗಿವೆ. ಹೀಗೆ ವೈವಿಧ್ಯಗಳ ಆಗರವಾಗಿರುವ ಹೆಗ್ಗಡದೇವನಕೋಟೆ ತಾಲೂಕನ್ನು ಮುಂದೆ ಪರಿಚಯಿಸಲಾಗಿದೆ.

**ಹೆಸರಿನ ಮೂಲ :** ರಾಜ್ಯದ ಬಹುಪಾಲು ತಾಲೂಕುಗಳಂತೆ ತಾಲೂಕು ಕೇಂದ್ರದ ಹೆಸರಿನಿಂದಲೇ ಕರೆಯಲ್ಪಡುವ ಈ ತಾಲೂಕಿಗೆ ಹೊಯ್ಸಳ ದಂಡನಾಯಕ ಹೆಗ್ಗಡದೇವನಿಂದ (೧೩೨೭) ಆ ಹೆಸರು ಬಂದಿದೆ ಎಂದು ಹೇಳಲಾಗುತ್ತದೆ. ಇದಕ್ಕೆ ಪೂರಕವಾಗಿ ಬಪ್ಪನಹಳ್ಳಿಯ ೧೩೨೭ರ ಶಾಸನವನ್ನು ಉಲ್ಲೇಖಿಸಬಹುದಾಗಿದ್ದು, ಅದರಲ್ಲಿ ಹೆಗ್ಗಡೆದೇವ ಎಂಬುವವನ ಹೆಸರಿರುವುದನ್ನು ಗಮನಿಸಬಹುದಾಗಿದೆ. ಅವನು ಊರಿನ ಸುತ್ತ ಕೋಟೆಯುನ್ನು ಕಟ್ಟಿಸಿ ಆಡಳಿತ ನಡೆಸುತ್ತಿದ್ದುದರಿಂದ ಈ ಊರಿಗೆ ಹೆಗ್ಗಡದೇವನಕೋಟೆ ಎಂದು ಹೆಸರಾಯಿತು ಎಂದು ತಿಳಿದುಬರುತ್ತದೆ. ಇದಕ್ಕೆ ಪೂರಕವಾಗಿ ಅಲ್ಲಲ್ಲಿ ಕೋಟೆಯ ಕುರುಹುಗಳು ಕಾಣಸಿಗುತ್ತವೆ. ಪ್ರಾಚೀನ ಕಾಲದಲ್ಲಿ ಈ ಪ್ರದೇಶವನ್ನು ಪುನ್ನಾಟ ಪ್ರದೇಶವೆಂದೂ, ಆನಂತರ ನುಗುನಾಡೆಂದೂ ಕರೆಯಲಾಗುತ್ತಿತ್ತು. ತಾಲೂಕಿನ ಶಾಸನಗಳಲ್ಲೂ ಹೆಗ್ಗಡದೇವನಕೋಟೆಗೆ ಸಂಬಂಧಿಸಿದಂತೆ ಅನೇಕ ಉಲ್ಲೇಖಗಳು ದೊರಕುತ್ತವೆ.

**ಭೌಗೋಳಿಕ ಸ್ಥಾನ ನಿರ್ದೇಶನ ಮತ್ತು ಮೇರೆ :** ಜಿಲ್ಲೆಯ ನೈಋತ್ಯ ಭಾಗದಲ್ಲಿ ೭೬°-೦೬′ ಮತ್ತು ೭೬°-೩೦′ ಪೂರ್ವ ರೇಖಾಂಶ ಹಾಗೂ ೧೧°-೪೪′ ಮತ್ತು ೧೨°-೧೪′ ಉತ್ತರ ಅಕ್ಷಾಂಶಗಳ ನಡುವೆ ಸಮುದ್ರ ಮಟ್ಟದಿಂದ ಸರಾಸರಿ ೮೫೦ ಮೀ. ಎತ್ತರದಲ್ಲಿ ಈ ತಾಲೂಕು ಹರಡಿಕೊಂಡಿದೆ. ತಾಲೂಕಿನ ಉತ್ತರದಲ್ಲಿ ಹುಣಸೂರು, ಈಶಾನ್ಯದಲ್ಲಿ ಮೈಸೂರು, ಪೂರ್ವದಲ್ಲಿ ನಂಜನಗೂಡು, ಆಗ್ನೇಯದಲ್ಲಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ, ದಕ್ಷಿಣದಲ್ಲಿ ಕೇರಳ ರಾಜ್ಯ, ಪಶ್ಚಿಮದಲ್ಲಿ ಕೊಡಗು ಜಿಲ್ಲೆಯ ವಿರಾಜಪೇಟೆ, ಈ ತಾಲೂಕಿನ ಗಡಿಪ್ರದೇಶಗಳಾಗಿವೆ.

**ಭೌಗೋಳಿಕ ವಿಸ್ತೀರ್ಣ ಮತ್ತು ಜನಸಂಖ್ಯೆ :** ತಾಲೂಕಿನ ಒಟ್ಟು ಭೂವಿಸ್ತೀರ್ಣವು ಸುಮಾರು ೧೬೨೨.೪೦ ಚ.ಕಿ.ಮೀ ಆಗಿದ್ದು ಜಿಲ್ಲೆಯ ಒಟ್ಟು ವಿಸ್ತೀರ್ಣದಲ್ಲಿ ಶೇ.೩೦ ರಷ್ಟಿದೆ. ೨೦೦೧ರ ಜನಗಣತಿಯಂತೆ ತಾಲೂಕಿನ ಒಟ್ಟು ಜನಸಂಖ್ಯೆ ೨,೪೫,೯೩೦. ತಾಲೂಕಿನಲ್ಲಿ ೧,೨೪,೭೦೫ ಪುರುಷರು ಹಾಗೂ ೧,೨೧,೨೨೫ ಮಹಿಳೆಯರಿದ್ದಾರೆ. ಇದರಲ್ಲಿ ೨,೩೩,೮೮೫ ಜನ ಗ್ರಾಮೀಣ ಪ್ರದೇಶಗಳಲ್ಲೂ ೧೨,೦೪೫ ಜನ ನಗರ ಪ್ರದೇಶಗಳಲ್ಲೂ ನೆಲಸಿದ್ದಾರೆ. ವಿಸ್ತೀರ್ಣದಲ್ಲಿ ಈ ತಾಲೂಕು ಜಿಲ್ಲೆಯಲ್ಲಿ ಅಗ್ರಸ್ಥಾನದಲ್ಲಿದ್ದರೂ ಜನಸಂಖ್ಯೆಯ ದೃಷ್ಟಿಯಿಂದ ೫ನೇ ಸ್ಥಾನದಲ್ಲಿದೆ. ತಾಲೂಕಿನ

ಜನಸಾಂದ್ರತಾ ಪ್ರಮಾಣವು ಪ್ರತಿ ಚ.ಕಿ.ಮೀ.ಗೆ ಕೇವಲ ೧೫೨ ಇದ್ದು, ಜಿಲ್ಲಾ ಮಟ್ಟದ ಜನಸಾಂದ್ರತೆಯ ಪ್ರಮಾಣ (೩೮೫)ಕ್ಕಿಂತ ಅಧಿಕ ಇದ್ದು ಜನಸಾಂದ್ರತೆಯ ದೃಷ್ಟಿಯಿಂದಲೂ ಜಿಲ್ಲೆಯಲ್ಲಿ ೫ನೇ ಸ್ಥಾನದಲ್ಲಿದೆ. ತಾಲೂಕಿನ ಸಂಭವನೀಯ ಜನಸಂಖ್ಯೆಯು ೨೦೧೦ರ ವೇಳೆಗೆ ೨,೭೫,೮೦೦ಕ್ಕೆ ಏರಬಹುದೆಂದು ನಿರೀಕ್ಷಿಸಲಾಗಿತ್ತು.

**ಆಡಳಿತಾತ್ಮಕ ಘಟಕವಾಗಿ ತಾಲೂಕಿನ ಇತಿಹಾಸ** : ಇದು ಕ್ರಿ.ಶ. ೫–೬ನೇ ಶತಮಾನದಲ್ಲಿದ್ದ ಪುನ್ನಾಟದ ಅರಸರ ಆಡಳಿತಕೊಳಪಟ್ಟಿದ್ದು ಪುನ್ನಾಟ ನಾಡೆಂದೆ ಖ್ಯಾತವಾಗಿದ್ದ ಈ ಪ್ರದೇಶಕ್ಕೆ ರಾಜಧಾನಿಯಾಗಿದ್ದ ಕೀರ್ತಿಪುರವೇ ಇಂದಿನ ಕಿತ್ತೂರು ಎಂಬ ಅಭಿಪ್ರಾಯವಿದೆ. ಆದರೆ ಪಿರಿಯಾಪಟ್ಟಣ ತಾಲೂಕಿನ ಕಿತ್ತೂರು ಅದೆಂಬ ಅಭಿಪ್ರಾಯವೂ ಇದೆ. ಆನಂತರ ತಲಕಾಡಿನ ಗಂಗರ ನಿಯಂತ್ರಣಕ್ಕೆ ಒಳಪಟ್ಟ ಈ ತಾಲೂಕು ಪ್ರದೇಶವು ನುಗು ನಾಡಿನಲ್ಲಿತ್ತು. ಗಂಗರನ್ನು ಬದಿಗೊತ್ತಿ ಬಂದ ಚೋಳರ ಆಡಳಿತಾವಧಿಯಲ್ಲಿ ಈ ಪ್ರದೇಶವು ಬಯಲು ನಾಡಿ (ವೈನಾಡು)ನಲ್ಲಿದ್ದ ಅಂಶ ಚೋಳ ಶಾಸನಗಳಿಂದ ತಿಳಿದುಬರುತ್ತದೆ. ಚೋಳರನ್ನು ಹೊಡೆದೋಡಿಸಿ ಅಧಿಕಾರಕ್ಕೆ ಬಂದ ಹೊಯ್ಸಳರ ಆಡಳಿತಾವಧಿಯಲ್ಲಿ ಈ ಪ್ರದೇಶವು 'ನುಗುನಾಡು' ಎಂದೇ ದಾಖಲಿಸಲ್ಪಟ್ಟಿದ್ದು, ತಾಲೂಕು ಕೇಂದ್ರ ಹೆಗ್ಗಡದೇವನಕೋಟೆ ರೂಪುಗೊಂಡದ್ದು ಇದೇ ಅವಧಿಯಲ್ಲಿ ಎಂಬ ಅಭಿಪ್ರಾಯವಿದೆ. ಆನಂತರ ಬಂದ ವಿಜಯನಗರದ ಅರಸರ ಆಳ್ವಿಕೆಯ ರುಚಿಯನ್ನು ಕಂಡ ಈ ಪ್ರದೇಶವು ಆಗಲೂ ಬಯಲ್ನಾಡು ಎಂದೇ ದಾಖಲಾಗಿದೆ. ಮೈಸೂರು ಅರಸರ ಆಳ್ವಿಕೆಯಲ್ಲಿ ಖೆಡ್ಡಾ ಕಾರ್ಯಾಚರಣೆಯಿಂದಾಗಿ ಇದು ವಿಶ್ವಖ್ಯಾತಿ ಪಡೆಯಿತು.

೧೮೬೨ರಲ್ಲಿ ಮೈಸೂರು ಜಿಲ್ಲೆಯು ರೂಪುಗೊಂಡಾಗ ಸರಗೂರನ್ನು ತಾಲೂಕು ಕೇಂದ್ರವನ್ನಾಗುಳ್ಳ ಹೆಗ್ಗಡದೇವನಕೋಟೆ ತಾಲೂಕು ಅಸ್ತಿತ್ವಕ್ಕೆ ಬಂದಿತು. ೧೮೮೬ರಲ್ಲಿ ತಾಲೂಕು ಕೇಂದ್ರವನ್ನು ಹೆಗ್ಗಡದೇವನಕೋಟೆಗೇ ಸ್ಥಳಾಂತರಿಸಲಾಯಿತು. ಅಲ್ಲಿಂದೀಚೆಗೆ ತಾಲೂಕಿನಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಪ್ರಸ್ತುತ ಕಸಬಾ(೬೬), ಹಂಪಾಪುರ(೬೧), ಸರಗೂರು(೫೦), ಕಂದಳಿಕೆ(೫೦), ಅಂತರಸಂತೆ(೫೫) ಎಂಬ ಐದು ಹೋಬಳಿಗಳು ತಾಲೂಕಿನಲ್ಲಿದ್ದು, ೨೪೩ ವಸತಿ ಹಾಗೂ ೩೮ ನಿರ್ವಸತಿ ಗ್ರಾಮಗಳ ಜೊತೆಗೆ ಎರಡು ಪಟ್ಟಣ ಪಂಚಾಯತಿ ಹಾಗೂ ೩೨ ಗ್ರಾಮಪಂಚಾಯ್ತಿಗಳಿವೆ.

**ತಾಲೂಕಿನ ಮೇಲ್ಮೈಲಕ್ಷಣ** : ಈ ತಾಲೂಕು ಪ್ರದೇಶವು ದಟ್ಟವಾದ ಅರಣ್ಯ ಪ್ರದೇಶದಿಂದ ಆವೃತವಾಗಿದ್ದು, ದಕ್ಷಿಣ ಪ್ರಸ್ಥಭೂಮಿಯ ಭಾಗವಾಗಿದೆ. ಏರಿಳಿತಗಳಿಂದ ಕೂಡಿದ್ದು ಅಲ್ಲಲ್ಲಿ ಸಣ್ಣಪುಟ್ಟ ಗುಡ್ಡಗಳಿದ್ದು, ಸೀಮಿತ ಬಯಲು ಪ್ರದೇಶವನ್ನು ಹೊಂದಿದೆ. ಸಮುದ್ರ ಮಟ್ಟದಿಂದ ಸುಮಾರು ೮೦೦ ರಿಂದ ೯೦೦ ಮೀ. ಎತ್ತರದಲ್ಲಿದ್ದು ಸಮಶೀತೋಷ್ಣ ವಾಯುಗುಣವನ್ನು ಹೊಂದಿದೆ.

**ಬೆಟ್ಟಗುಡ್ಡಗಳು** : ತಾಲೂಕಿನ ಪಶ್ಚಿಮ ಭಾಗದಲ್ಲಿ ಪಶ್ಚಿಮ ಘಟ್ಟಗಳ ಪರ್ವತ ಶ್ರೇಣಿ ಇದ್ದು ದಟ್ಟವಾದ ಅರಣ್ಯ ಪ್ರದೇಶಗಳಿಂದ ಕೂಡಿರುವ ತಾಲೂಕಿನ ಮಾದಾಪುರ

ಬಳಿಯಲ್ಲಿರುವ ಮೇಟಗಲ್ ಗುಡ್ಡ, ಸಂತೆ ಸರಗೂರಿಗೆ ಸಮೀಪದಲ್ಲಿರುವ ಚಿಕ್ಕಮ್ಮದೇವಿ ಬೆಟ್ಟ, ತಾಲೂಕಿನ ಇತರ ಮುಖ್ಯ ಬೆಟ್ಟಗಳಾಗಿವೆ. ಮೇಟಗಲ್ ಗುಡ್ಡದಮೇಲೆ ಮಹದೇಶ್ವರ ಸ್ವಾಮಿ ಹಾಗೂ ಆಂಜನೇಯ ಸ್ವಾಮಿ ದೇವಸ್ಥಾನಗಳಿವೆ. ಚಿಕ್ಕಮ್ಮದೇವಿ ಬೆಟ್ಟದಲ್ಲಿ ಚಿಕ್ಕಮ್ಮದೇವಿ ಗುಡಿ ಇದ್ದು ಪ್ರತಿವರ್ಷ ಎರಡೂ ಕಡೆ ಜಾತ್ರೆ ನಡೆಯುತ್ತದೆ.

**ಜಲ ಸಂಪನ್ಮೂಲ :** ಕಾವೇರಿನದಿಯ ಉಪನದಿಯಾದ ಕಪಿಲ(ಕಬಿನಿ) ಮತ್ತದರ ಉಪನದಿಗಳಾದ ತಾರಕ, ನುಗು ಮೊದಲಾದವು ತಾಲೂಕಿನಲ್ಲಿ ಹರಿಯುತ್ತವೆ. ಈ ನದಿಗಳಿಗೂ ಅಣೆಕಟ್ಟನ್ನು ಕಟ್ಟಲಾಗಿದೆ. ಕಪಿಲಾನದಿಗೆ ಬೀಚನಹಳ್ಳಿ ಬಳಿ, ತಾರಕಾನದಿಗೆ ಪೆಂಜಹಳ್ಳಿ ಬಳಿ ಹಾಗೂ ನುಗು ನದಿಗೆ ಬೀರವಾಳ್ ಹಾಗೂ ಲಕ್ಷ್ಮಣಪುರ ಬಳಿ ಹಾಗೂ ಹೆಬ್ಬಳ್ಳಕ್ಕೆ ಹೆಗ್ಗಡದೇವನ ಕೋಟೆಗೆ ಸಮೀಪದಲ್ಲಿ ಅಣೆಕಟ್ಟು ಕಟ್ಟಲಾಗಿದೆ. ಹೆಗ್ಗಡದೇವನಕೋಟೆಗೆ ೧೫ ಕಿ.ಮೀ. ದೂರದಲ್ಲಿರುವ ಕಪಿಲ(ಕಬಿನಿ) ಜಲಾಶಯದ ಬಳಿ ವಿದ್ಯುತ್ ಉತ್ಪಾದನಾ ಕೇಂದ್ರವೂ ಇದೆ.

**ಕಪಿಲ :** ಕಪ್ಪುಹೊಳೆ ಎಂದೂ ಕರೆಯಲ್ಪಡುವ ಇದು ಕಾವೇರಿಯ ಪ್ರಮುಖ ಉಪನದಿ. ಕೇರಳ ರಾಜ್ಯದ ಉತ್ತರ ವೈನಾಡ್ ಶ್ರೇಣಿಯಲ್ಲಿ (೨,೧೪೦ ಮೀ) ಜನಿಸಿ, ಮಾನನ್ತೋಡಿ ಹಾಗೂ ಪನಮರಮ್ ಪುಝ ಹೊಳೆಗಳಾಗಿ ಹುಟ್ಟಿ ಮುಂದೆ ಒಂದಾಗಿ ಹರಿದು, ಸಂಗಮ ಸ್ಥಳದಿಂದ ೧೫ ಕಿ.ಮೀ. ಕೆಳಕ್ಕೆ ಕೇರಳ-ಕರ್ನಾಟಕ ಗಡಿಯಾಗಿ ೧೨ ಕಿ.ಮೀ. ಸಾಗಿ ಕಾಕನಕೋಟೆ ಬಳಿ ಪೂರ್ವಕ್ಕೆ ತಿರುಗುತ್ತಿದ್ದಂತೆ, ಗುಂಡಲ್ ಹಾಗೂ ನುಗ್ಗುಹೊಳೆಗಳು ನಂಜನಗೂಡು ಬಳಿ ಇದನ್ನು ಕೂಡುತ್ತವೆ.

**ತಾರಕಾ :** ಕಪಿಲಾ ನದಿಯ ಉಪನದಿಯಾದ ತಾರಕಾ ನದಿಯು ದಕ್ಷಿಣ ಕೊಡಗಿನ ಪೂರ್ವಭಾಗದಲ್ಲಿ ಹುಟ್ಟಿ ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ೬೪ಕಿ.ಮೀ. ಹರಿದು ಮಟಕೆರೆ ಗ್ರಾಮದ ಬಳಿ ಕಪಿಲಾನದಿಯನ್ನು ಕೂಡುತ್ತದೆ. ಇದಕ್ಕೆ ಪೆಂಜಹಳ್ಳಿ ಗ್ರಾಮದ ಬಳಿ ಅಣೆಕಟ್ಟನ್ನು ನಿರ್ಮಿಸಲಾಗಿದೆ.

**ನುಗು :** ಇದು ತಾಲೂಕಿನಲ್ಲಿ ಹರಿಯುವ ಇನ್ನೊಂದು ನದಿ. ಇದನ್ನು ಭೃಗು ನದಿ ಎಂದೂ ಕರೆಯುತ್ತಾರೆ. ಈ ನದಿಗೆ ಬೀರವಾಳ್ ಗ್ರಾಮದ ಬಳಿ ಜಲಾಶಯವನ್ನು ನಿರ್ಮಿಸಿ ತಾಲೂಕಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಇಲ್ಲಿಯೂ ಸಹ ವಿದ್ಯುತ್ ಉತ್ಪಾದನಾ ಕೇಂದ್ರ ಇದೆ. ಇದು ಹಂಪಾಪುರದ ಬಳಿ ಕಪಿಲಾ ನದಿಯನ್ನು ಕೂಡುತ್ತದೆ. ನುಗು ಅಣೆಕಟ್ಟೆ ಪ್ರದೇಶದಲ್ಲಿ ಸುಮಾರು ೩೦ ಚ.ಕಿ.ಮೀ. ಕಾಡನ್ನು ನುಗು ವನ್ಯಜೀವಿಧಾಮ ಎಂದು ಘೋಷಿಸಿ ಸಂರಕ್ಷಿಸಲಾಗುತ್ತಿದೆ.

**ಹೆಬ್ಬಳ್ಳ :** ತಾಲೂಕಿನಲ್ಲಿ ಹರಿಯುವ ಇನ್ನೊಂದು ಉಪ ನದಿ. ಹೆಗ್ಗಡದೇವನ ಕೋಟೆಯಿಂದ ಎರಡು ಕಿ.ಮೀ. ದೂರದಲ್ಲಿ ಈ ಹಳ್ಳಕ್ಕೆ ಅಣೆಕಟ್ಟೆಯನ್ನು ಕಟ್ಟಿ ತಾಲೂಕಿನ ಅನೇಕ ಗ್ರಾಮಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

**ಅಂತರ್ಜಲ :** ಜಿಲ್ಲೆಯ ಇತರ ಕಡೆಗಳಂತೆ ಈ ತಾಲೂಕಿನಲ್ಲಿಯೂ ಅಂತರ್ಜಲ ಸಮೃದ್ಧವಾಗಿದೆ. ತಾಲೂಕಿನಲ್ಲಿ ಅಂತರ್ಜಲಮಟ್ಟವು ನೀರಾವರಿ ಪ್ರದೇಶದಲ್ಲಿ ಕನಿಷ್ಠ ೭.೭೫ ಮೀ. ನಿಂದ ಗರಿಷ್ಠ ೧೦.೬೫ ಮೀ. ಹಾಗೂ ಖುಷ್ಕಿ ಪ್ರದೇಶದಲ್ಲಿ ೧೬.೩೦ ಮೀ.ನಿಂದ ಗರಿಷ್ಠ ೨೬.೯೦ ಮೀ. ಆಳದಲ್ಲಿ ಲಭಿಸುತ್ತಿದ್ದು, ಲಭ್ಯವಿದ್ದ ೯೪೪೧ ಹೆಕ್ಟೇರು, ಮೀ. ಅಂತರ್ಜಲ ಉತ್ಕರ್ಷದಲ್ಲಿ ೩,೫೪೧ ಹೆ.ಮೀ. ಬಳಕೆಯಾಗಿದ್ದು, ಇನ್ನೂ ೫೯೦೦ ಹೆ.ಮೀ. ಅಂತರ್ಜಲವು ಬಳಕೆಯಾಗಬೇಕಿತ್ತು. ವ್ಯವಸಾಯಕ್ಕೆ ಹಾಗೂ ಕುಡಿಯುವ ನೀರಿಗೆ ಅನುಕೂಲವಾಗುವಂತೆ ಅನೇಕ ಕೊಳವೆಬಾವಿಗಳನ್ನು ತೆಗೆಯಲಾಗಿದೆ. ತಾಲೂಕಿನಲ್ಲಿ ಕೊಳವೆ ಬಾವಿಗಳು ದಶಕದಿಂದ ದಶಕಕ್ಕೆ ವೃದ್ಧಿಸುತ್ತಾ ಬಂದಿದೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ೬,೪೧೮ ನೀರಾವರಿ ಪಂಪುಸೆಟ್ಟುಗಳು ಕಾರ್ಯ ನಿರ್ವಹಿಸುತ್ತಿದ್ದವು.

**ತಾಲೂಕಿನ ಭೂಶಿಲಾ ಲಕ್ಷಣ :** ಈ ತಾಲೂಕು ಪ್ರದೇಶವು ಸುಮಾರು ೨೯೫–೧೫ ಕೋಟಿ ವರ್ಷಗಳಷ್ಟು ಪ್ರಾಚೀನವಾದ ಸರಗೂರು ಮೇಲುಹೊದಿಕೆ ಪದರವನ್ನು ಹೊಂದಿರುವ ಅಂಶವನ್ನು ಭೂಗರ್ಭಶಾಸ್ತ್ರಜ್ಞರು ಈಗಾಗಲೇ ಬೆಳಕಿಗೆ ತಂದಿದ್ದಾರೆ. ಸರಗೂರು ಪದರಶಿಲೆಗಳು ತಾಲೂಕಿನ ಈಶಾನ್ಯ ಭಾಗದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಈ ಶಿಲೆಯು ಕೆಯನೈಟ್, ಸಿಲ್ಲಿಮನೈಟ್, ಗ್ರಾಫೈಟ್ ಹಾಗೂ ಇತರ ಖನಿಜಗಳನ್ನು ಹೊಂದಿದೆ.

**ಖನಿಜಸಂಪತ್ತು :** ಅಂತರಸಂತೆಯಲ್ಲಿ ಕೈಸೊಟೆಲ್ ಕಲ್ಲುನಾರು ಸಿಗುತ್ತದೆ. ಕಬ್ಬಿಣದ ಅದಿರನ್ನು ಉಳ್ಳ ಶಿಲೆಗಳು ಸರಗೂರು ಶಿಲಾಪ್ರದೇಶದ ಮೊಟ್ಟ, ಇಟ್ನ, ಕುಂದಪಟ್ಣ, ಕುಲ್ಯಗಳಲ್ಲಿವೆ. ಅದರಲ್ಲೂ ಮೊಟ್ಟದ ನಿಕ್ಷೇಪವು ೧೩.೨೦ ಮಿಲಿಯನ್ ಟನ್‌ಗಳಷ್ಟಿದ್ದು, ಸುಮಾರು ಆರು ಮೀ. ಆಳದಲ್ಲೂ ದೊರೆಯುತ್ತವೆ. ಕೆಯನೈಟ್ ಸಿಲ್ಲಿಮನೈಟ್ ನಿಕ್ಷೇಪವು ತಾಲೂಕಿನ ತೊರವಳ್ಳೀ ಶಾಂತಿಪುರ ಮುಂತಾದೆಡೆ ಯಥೇಚ್ಛವಾಗಿ ಲಭಿಸುತ್ತಿದೆ. ಅಂತರಸಂತೆಯಲ್ಲಿ 'ಸೀಸ' ಅಲ್ಪಪ್ರಮಾಣದಲ್ಲಿ ದೊರೆಯುತ್ತವೆ. ಸುಣ್ಣದ ಕಲ್ಲು ಹಾಗೂ ಡೊಮೊಮೈಟ್ ಈ ತಾಲೂಕಿನ ಬೆಟ್ಟದಬೀಡಿನ ವಾಯುವ್ಯ ಈಶಾನ್ಯ ಭಾಗಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಸಿಗುತ್ತದೆ. ಬಳಪದಕಲ್ಲು ಮನುಗನಹಳ್ಳಿ ಹಾಗೂ ಸರಗೂರು ಬಳಿ ಲಭಿಸುತ್ತದೆ. ಮರ್ಮಿಕುಲೈಟ್ ನಿಕ್ಷೇಪವು ತೊರವಳ್ಳಿಯ, ಟಾಲೆಮಿ ತನ್ನ ಗ್ರಂಥದಲ್ಲಿ ಪುನ್ನಾಟಿ ಪ್ರದೇಶವು ಬೆರಿಲ್ ಹರಳಿಗೆ ಸಮೃದ್ಧವಾಗಿದ್ದು, ಪ್ರಸಿದ್ಧವಾಗಿತ್ತು ಎಂದು ಹೇಳಿದ್ದು, ಆ ಪ್ರದೇಶವೇ ಹೆಗ್ಗಡದೇವನಕೋಟೆ ಭಾಗವೆಂದು ನಂಬಲಾಗಿದೆ. ನೀಲಿ–ಹಸಿರು ವರ್ಣದ ಕೆಯನೈಟ್ ಸರಗೂರು ಸುತ್ತಮುತ್ತ ಲಭ್ಯವಿದೆ. ಕೆಯನೈಟ್–ಕೊರಂಡಮ್ ಖನಿಜ ಪಟ್ಟಿಯು ಇಟ್ನ, ಮದುಗನಹಳ್ಳಿ ಬಳಿ ಕಂಡುಬಂದಿದೆ. ಅಲ್ಲದೆ ಚಂದ್ರಶಿಲಾ ನಿಕ್ಷೇಪವೂ ಅಲ್ಲಿದೆ.

**ಭೂಕಂಪನ ಮುಕ್ತ ವಲಯ :** ನಿಸರ್ಗದ ವಿಕೋಪಗಳಲ್ಲಿ ಒಂದಾದ ಭೂಕಂಪವು ಬಹು ಹಿಂದಿನಿಂದಲೂ ಮಾನವನನ್ನು ಕಾಡಿದೆ. ಪ್ರೀ ಕ್ಯಾಂಬಿಯನ್ ಯುಗದಲ್ಲಿ

ರೂಪುಗೊಂಡಿರುವ ದಕ್ಷಿಣ ಪೀಠಭೂಮಿಯ ಭಾಗವಾಗಿರುವ ಈ ತಾಲೂಕು ಪ್ರದೇಶವು ಭೂಕಂಪರಹಿತ ಪ್ರದೇಶವೆಂದೇ ತೀರ ಇತ್ತೀಚಿನವರೆಗೆ ಭಾವಿಸಲಾಗಿತ್ತು. ಆದರೆ ನಂತರದಲ್ಲಿ ವಿವಿಧೆಡೆ ಘಟಿಸಿರುವ ಭೂಕಂಪಗಳು ಮೇಲಿನ ಅಭಿಪ್ರಾಯವನ್ನು ಶಂಕಿಸುವಂತೆ ಮಾಡಿವೆ. ತಾಲೂಕಿನಲ್ಲಿ ಭೂಕಂಪದ ಬಗ್ಗೆ ಅಲ್ಪ ಸ್ವಲ್ಪ ಅನುಭವವಾಗಿರುವುದಕ್ಕೆ ವರದಿ ಇದೆ. ಬ್ಯೂರೋ ಆಫ್ ಇಂಡಿಯನ್ ಸ್ಟಾಂಡರ್ಡ್ ನವರು ರೂಪಿಸಿರುವ ಭಾರತೀಯ ಭೂಕಂಪನ ವಲಯ ನಕಾಶೆಯಲ್ಲಿ ಕರ್ನಾಟಕ ರಾಜ್ಯವನ್ನು ೧, ೨, ೩ನೇ ವಲಯದಲ್ಲಿ ಗುರುತಿಸಲಾಗಿದೆ. ಇದನ್ನು ಸುಧಾರಿತ ಮೆಕಾಲಿಕ್ ಅನ್ವಯದ ಗರಿಷ್ಠ ತೀವ್ರತೆಯಲ್ಲಿರುವ ೫,೬,೭ ಪ್ರವರ್ಗದೊಂದಿಗೆ ಸಮೀಕರಿಸಬಹುದಾಗಿದೆ.

**ಸಸ್ಯ ಸಂಪತ್ತು :** ಹೆಗ್ಗಡದೇವನಕೋಟೆ ತಾಲೂಕಿನ ೩೩,೦೩೧ ಹೆಕ್ಟೇರು ಪ್ರದೇಶವು ದಟ್ಟವಾದ ಅರಣ್ಯ ಪ್ರದೇಶದಿಂದ ಕೂಡಿದ್ದು ವೈವಿಧ್ಯಮಯವಾದ ಗಿಡ ಮರಗಳು ಹುಲುಸಾಗಿ ಬೆಳೆದಿರುವುದನ್ನು ಕಾಣಬಹುದು. ನಂದಿ, ತೇಗ, ಬೀಟೆ, ಹಲಸು, ಮತ್ತಿ, ಹುಣಿಸೆ, ಬೇವು, ಆಲ, ಅರಳಿ, ಬಿದಿರು ಮೊದಲಾದ ಮರಗಳು ಅಧಿಕ ಪ್ರಮಾಣದಲ್ಲಿ ಬೆಳೆದು ತಾಲೂಕಿನ ಗೃಹ ಕೈಗಾರಿಕೆಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಿದೆ. ಕಾಕನಕೋಟೆ ಅರಣ್ಯ ಪ್ರದೇಶದಲ್ಲಿ ಕೋಣನಕೊಂಬು ಎಂಬ ಬಿಳಿಯ ಪುಷ್ಪ, ಕೆಂಪು ವನಿಜ ಪುಷ್ಪಗಳನ್ನು ಬೇಸಿಗೆಯಲ್ಲಿ ನೋಡಬಹುದಾಗಿದೆ.

**ಪ್ರಾಣಿ ಸಂಪತ್ತು :** ಹೆಗ್ಗಡದೇವನಕೋಟೆ ತಾಲೂಕಿನ ಅರಣ್ಯ ಪ್ರದೇಶವಾದ ಕಾಕನಕೋಟೆ, ಮೇಟಿಕುಪ್ಪೆ, ಬಳ್ಳೆ, ಬೇಗೂರು, ಕಿತ್ತೂರು, ವೀರನಹೊಸಹಳ್ಳಿ, ಐನೂರು ಮಾರಿಗುಡಿ ಮೊದಲಾದ ಅರಣ್ಯ ಪ್ರದೇಶಗಳಲ್ಲಿ ಆನೆ, ಚಿರತೆ, ನರಿ, ಕಾಡೆಮ್ಮೆ, ಕಾಡಹಂದಿ, ಕಾಡುಬೆಕ್ಕು, ಪುನುಗುಬೆಕ್ಕು, ಮಂಗ, ಮುಂಗುಸಿ, ಅಳಿಲು, ಜಿಂಕೆ ಮೊದಲಾದ ಪ್ರಾಣಿಗಳು, ನಾನಾ ಜಾತಿಯ ಹಾವು, ಪಶು-ಪಕ್ಷಿಗಳು, ಬಗೆ ಬಗೆಯ ಚಿಟ್ಟೆಗಳು, ದುಂಬಿಗಳು ಮತ್ತು ಜಲಾಶಯಗಳಲ್ಲಿ ವಿವಿಧ ಜಾತಿಯ ಮೀನುಗಳು ಕಂಡು ಬರುತ್ತವೆ.

**ಖೆಡ್ಡ ಕಾರ್ಯಾಚರಣೆ :** ಆನೆಗಳನ್ನು ಹಿಡಿಯುವ ಖೆಡ್ಡ ಆಚರಣೆಯನ್ನು ರಾಜ್ಯದಲ್ಲಿ ಗಂಗರಷ್ಟು ಹಿಂದಕ್ಕೆ ಗುರುತಿಸಬಹುದಾಗಿದ್ದು, ಗಜಗಳನ್ನು ಹಿಡಿದು ಪಳಗಿಸುವ ಕ್ರಿಯೆಯಲ್ಲಿ ಇವರು ಪರಿಣಿತರಿದ್ದು, ಕೆಲವು ಗಂಗರಸರು, ಈ ಸಂಬಂಧ ಕೃತಿಗಳನ್ನೂ ರಚಿಸಿದ್ದು ಉಲ್ಲೇಖಾರ್ಹ. ಮುಂದೆ ಖೆಡ್ಡ ಹೆಚ್ಚು ಜನಪ್ರಿಯಗೊಂಡಿದ್ದು, ಹೈದರ್ ಆಳ್ವಿಕೆಯಲ್ಲಿ. ಹಿಂದೆ ಗುಂಡಿ ತೋಡಿ ಆನೆಗಳನ್ನು ಹಿಡಿಯುವ ವಿಧಾನಕ್ಕೆ 'ಖೆಡ್ಡ' ಎಂದು ಕರೆಯಲಾಗುತ್ತಿತ್ತು. ೧೮೭೪ರಲ್ಲಿ ಬೂದಿಪಡಗ ಬೆಟ್ಟದಲ್ಲಿ ಮೊದಲ ಯಶಸ್ವಿ ಖೆಡ್ಡಾಚರಣೆಯನ್ನು ಮಾಡಲಾಯಿತು. ಅಲ್ಲಿಂದ ೧೯೭೧ರವರೆಗೆ ನಡೆದಿರುವ ವಿವಿಧ ಖೆಡ್ಡಾಚರಣೆಯಲ್ಲಿ ಕಾಕನಕೋಟೆಯ ೧೮೯೦-೯೧ರ ಕಾರ್ಯಾಚರಣೆಯಲ್ಲಿ ೧೦೭, ೧೮೯೧-೯೨(೭೫), ೧೮೯೨-೯೩(೭೬), ೧೮೯೫-೯೬ (೩೩), ೧೮೯೬-೯೭(೧೭೦), ೧೮೯೭-೯೮ (೨೭), ೧೮೯೮-೯೯(೧೭), ೧೯೦೫-೦೬(೭೮),

೧೯೦೯-೧೦(೯೧), ೧೯೧೩-೧೪(೧೦೯), ೧೯೧೯-೨೦)೫೦), ೧೯೨೨-೨೩(೨೨), ೧೯೨೩-೨೪(೫೧), ೧೯೨೯-೩೦(೮೮), ೧೯೩೫-೩೬(೬೦), ೧೯೩೮-೩೯(೫೦), ೧೯೩೯-೪೦(೮೦), ೧೯೪೦-೪೧(೭), ೧೯೪೮-೪೯(೩೫), ೧೯೪೯-೫೦(೩೮), ೧೯೫೩-೫೪(೭೧), ೧೯೬೦-೬೧(೬೬), ೧೯೬೭-೬೮(೮೮) ಹಾಗೂ ೧೯೭೦-೭೧ರಲ್ಲಿ (೪೭) ಆನೆಗಳನ್ನು ಯಶಸ್ವಿಯಾಗಿ ಹಿಡಿದು ಪಳಗಿಸಲಾಗಿತ್ತು. ೧೯೭೧ರ ನಂತರ ಖೆಡ್ಡ ಕಾರ್ಯಾಚರಣೆ ನಡೆದಿಲ್ಲ.

**ಅರಣ್ಯ ಸಂಪತ್ತು :** ಹೆಗ್ಗಡದೇವನಕೋಟೆಯ ಅನೇಕ ಕಡೆ ದಟ್ಟವಾದ ಅರಣ್ಯ ಸಂಪತ್ತು ಕಂಡು ಬರುತ್ತದೆ. ಸಂರಕ್ಷಿತ ಅರಣ್ಯ ಪ್ರದೇಶ ತಾಲೂಕಿನಲ್ಲಿದ್ದು ಮರ ಮುಟ್ಟುಗಳು, ಪ್ರಾಣಿ ಪಕ್ಷಿಗಳ ಸಂಕುಲವನ್ನು ಸಂರಕ್ಷಿಸಲು, ಕ್ರಮವನ್ನು ಕೈಗೊಳ್ಳಲಾಗಿದೆ. ತಾಲೂಕಿನ ಅರಣ್ಯ ಪ್ರದೇಶದ ಕೆಲವು ಭಾಗವನ್ನು ಆದಿವಾಸಿಗಳು, ಹರಿಜನ ಗಿರಿಜನರ ಜೀವನೋಪಾಯಕ್ಕಾಗಿ ಬಿಟ್ಟುಕೊಟ್ಟು ಅವರು ಕೃಷಿಯಲ್ಲಿ ತೊಡಗಲು ಸರ್ಕಾರ ಎಲ್ಲಾ ರೀತಿಯ ಕ್ರಮವನ್ನು ಕೈಗೊಂಡಿದೆ. ಉರುವಲು ಕಟ್ಟಿಗೆಯ ಮಾರಾಟ ಕೇಂದ್ರಗಳನ್ನು ಸರ್ಕಾರ, ಹೆಗ್ಗಡದೇವನಕೋಟೆ, ಸರಗೂರು ಹಾಗೂ ಅಂತರಸಂತೆಗಳಲ್ಲಿ ಹೊಂದಿತ್ತು. ಸರಗೂರಿನಲ್ಲಿ ಬೊಂಬು ಬಿದಿರು ಮಾರಾಟ ಮಳಿಗೆ ಇದೆ. ೧೯೧೬ ಹಾಗೂ ೧೯೬೦ರಲ್ಲಿ ಬಿದಿರು ಹೂ ಹೆಚ್ಚಾಗಿ ಬೆಳೆದು ಕಾಡ್ಗಿಚ್ಚಿಗೆ ದಾರಿಮಾಡಿಕೊಟ್ಟಿತ್ತು. ಸಾಮಾಜಿಕ ಅರಣ್ಯೀಕರಣಕ್ಕೆ ವಿಶ್ವಬ್ಯಾಂಕಿನ ಐದು ವರ್ಷ ಅವಧಿಯು ಯೋಜನೆಯಂತೆ ೧೯೮೩ರಲ್ಲಿ ಜಾರಿಗೆ ಬಂದಿತು. ಇದರ ಭಾಗವಾಗಿ ನರ್ಸರಿಗಳನ್ನು ಅಭಿವೃದ್ಧಿಪಡಿಸಿ, ವನಮಹೋತ್ಸವ ಇತ್ಯಾದಿ ಕಾರ್ಯಕ್ರಮಗಳ ಮೂಲಕ ಸಸ್ಯಗಳ ಉಚಿತ ವಿತರಣೆಗೆ ವ್ಯವಸ್ಥೆ ಮಾಡಲಾಯಿತು.

**ಹವಾಗುಣ :** ತಾಲೂಕಿನ ಹವಾಗುಣವು ವರ್ಷದುದ್ದಕ್ಕೂ ಸಾಧಾರಣವಾಗಿ ತಂಪಾಗಿರುತ್ತದೆ. ಹವಾಮಾನಕ್ಕೆ ಅನುಗುಣವಾಗಿ ಬೇಸಿಗೆ ಕಾಲ, ಮಳೆಗಾಲ ಹಾಗೂ ಚಳಿಗಾಲ ಎಂದು ವಿಂಗಡಿಸಲಾಗಿದೆ.

**ಮಳೆ** : ತಾಲೂಕಿನ ಪಶ್ಚಿಮ ಘಟ್ಟಗಳು ಹಾಗೂ ಅರಣ್ಯ ಪ್ರದೇಶಗಳಿಂದಾಗಿ ಜಿಲ್ಲೆಯ ಇತರ ತಾಲೂಕುಗಳಿಗೆ ಹೋಲಿಸಿದಾಗ ಇಲ್ಲಿ ಹೆಚ್ಚು ಮಳೆ ಬೀಳುತ್ತದೆ. ಇದರಿಂದ ಉತ್ತಮ ಬೆಳೆ ತೆಗೆಯಲು ಅನುಕೂಲವಾಗಿದೆ. ತಾಲೂಕಿನಲ್ಲಿರುವ ಏಳು ಮಳೆಮಾಪಕ ಕೇಂದ್ರಗಳು ಕಾಲಕಾಲಕ್ಕೆ ತಾಲೂಕಿನಲ್ಲಿ ಆಗುವ ಮಳೆಯ ಬಗ್ಗೆ ಪೂರಕವಾದ ಮಾಹಿತಿಯನ್ನು ಒದಗಿಸುತ್ತವೆ. ತಾಲೂಕಿನಲ್ಲಿ ೧೯೪೧-೯೦ರ ಅವಧಿಯಲ್ಲಿ ೮೩೨ ಮಿ.ಮೀ. ಸರಾಸರಿ ವಾಡಿಕೆ ಮಳೆಯಾಗಿದ್ದು, ಮಳೆಯಾದ ಸರಾಸರಿ ದಿನಗಳು ೫೫ ಇತ್ತು. ಅದೇ ೨೦೦೮ರಲ್ಲಿ ೭೮೯ ಮಿ.ಮೀ. ಮಳೆಯಾಗಿದ್ದು, ೬೦ ದಿನ ಮಳೆಯಾಗಿತ್ತು.

**ಉಷ್ಣಾಂಶ :** ಜಿಲ್ಲಾ ಕೇಂದ್ರವಾದ ಮೈಸೂರಿನಲ್ಲಿ ಉಷ್ಣಾಂಶವನ್ನು ತಿಳಿಯಲು ಉಷ್ಣಾಂಶ ಮಾಪನ ವೀಕ್ಷಣಾಲಯವಿದೆ. ಹೆಗ್ಗಡದೇವನಕೋಟೆ ತಾಲೂಕಿನಲ್ಲಿ ಮಾರ್ಚ್ ತಿಂಗಳಿನಿಂದ ಮೇ ತಿಂಗಳವರೆಗೆ ಉಷ್ಣಾಂಶದಲ್ಲಿ ನಿರಂತರ ಏರಿಕೆ ಇರುತ್ತದೆ. ಜೂನ್ ವೇಳೆಗೆ

ಉಷ್ಣಾಂಶದಲ್ಲಿ ಆಗುವ ಗಣನೀಯ ಕುಸಿತದಿಂದಾಗಿ ಮಾನ್ಸೂನ್ ಸಮಯದಲ್ಲಿ ಹವಾಮಾನವು ಹಿತಕರವಾಗಿದ್ದು ಉತ್ತಮ ಮಳೆಯಾಗುತ್ತದೆ.

**ಪರಿಸರ ಮಾಲಿನ್ಯ :** ಕೈಗಾರಿಕಾ ದೃಷ್ಠಿಯಿಂದ ಅತ್ಯಂತ ಹಿಂದುಳಿದಿರುವ ಕೈಗಾರಿಕಾ ವಲಯ–Iಕ್ಕೆ ಸೇರಿದ ಪ್ರದೇಶಕ್ಕೆ ಈ ತಾಲೂಕು ಸೇರಿದ್ದು, ರಾಜ್ಯ ಸರ್ಕಾರವು ನೂತನ ಕೈಗಾರಿಕಾ ನೀತಿಯ ಕೈಗಾರಿಕಾಭಿವೃದ್ಧಿಗಾಗಿ ಸಾಕಷ್ಟು ಉತ್ತೇಜನವನ್ನು ನೀಡುತ್ತಿದೆ. ಅದರಿಂದಾಗಿ ಉಂಟಾಗುವ ಪರಿಸರ ಮಾಲಿನ್ಯ ಪಟ್ಟಣಗಳಲ್ಲಿಯ ಘನೀಕೃತ ಕಸ ಹಾಗೂ ಕೊಳಚೆ ನೀರಿನ ನಿರ್ವಹಣೆ ನಿಯಂತ್ರಣಕ್ಕಾಗಿ ವಾಯುಮಾಲಿನ್ಯ ನಿಯಂತ್ರಣ ಮಂಡಲಿಯನ್ನು ಸ್ಥಾಪಿಸಿದೆ. ಹೆಗ್ಗಡದೇವನಕೋಟೆ ತಾಲೂಕಿನಲ್ಲಿನ ಸಂಪನ್ಮೂಲವು ಸೇರಿದಂತೆ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಕ್ರಮಕೈಗೊಳ್ಳಲಾಗಿದೆ. ಈ ತಾಲೂಕು ಕೈಗಾರಿಕೋದ್ಯಮದಲ್ಲಿ ಹಿಂದುಳಿದಿರುವ ಹಿನ್ನೆಲೆಯಲ್ಲಿ ಪರಿಸರವು ಅಷ್ಟಾಗಿ ಕಲುಷಿತಗೊಂಡಿಲ್ಲವೆಂದು ಹೇಳಲಾಗುತ್ತಿದೆ.

* * * *